# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1439
ಉತ್ತರಿಸಬೇಕಾದ ದಿನಾಂಕ : 30.12.2022
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ವಸತಿ ಕ್ರೀಡಾ ಶಾಲೆ/ಕಾಲೇಜುಗಳ ಸಂಖ್ಯೆ ಎಷ್ಟು; (ವಿವರಗಳೊಡನೆ ಮಾಹಿತಿ ನೀಡುವುದು)</td><td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿ ಕೆಳಕಂಡ 02 ಕ್ರೀಡಾ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br>1. ಕ್ರೀಡಾ ಶಾಲೆ, ವಿದ್ಯಾನಗರ, ಬೆಂಗಳೂರು ಉತ್ತರ ತಾಲ್ಲೂಕು (8ನೇ ತರಗತಿಯಿಂದ ಮೇಲ್ಪಟ್ಟ ಕ್ರೀಡಾಪಟುಗಳು).<br>2. ಕ್ರೀಡಾ ಶಾಲೆ, ಕೂಡಿಗೆ, ಕೊಡಗು ಜಿಲ್ಲೆ(8ನೇ ತರಗತಿಯಿಂದ ದ್ವಿತೀಯ ಪಿಯುಸಿ ಯವರೆಗಿನ ಕ್ರೀಡಾಪಟುಗಳು)<br>ಅಲ್ಲದೇ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿ ರಾಜ್ಯದಾದ್ಯಂತ 32 ಕ್ರೀಡಾ ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ನಿಲಯದಲ್ಲಿನ ಕ್ರೀಡಾಪಟುಗಳು ಸಮೀಪದ ಸರ್ಕಾರಿ ಹಾಗೂ ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಸದರಿ ಕ್ರೀಡಾ ಶಾಲೆ/ ಕಾಲೇಜುಗಳಲ್ಲಿ ಮಂಜೂರಾದ ತರಬೇತಿದಾರರ ಹುದ್ದೆಗಳ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಶಾಲಾ ಕಾಲೇಜುವಾರು ವಿವರ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ಯುಸೇಇ 253 ಯುಸೇಕ್ರೀ 2012, ದಿನಾಂಕ: 28-01-2015 ರನ್ವಯ ಕೊಡಗು, ಬಳ್ಳಾರಿ, ಯಾದಗಿರಿ, ಕಲ್ಬುರ್ಗಿ ಹಾಗೂ ಚಿಕ್ಕಬಳ್ಳಾಪುರ ಕ್ರೀಡಾ ವಸತಿ ನಿಲಯಗಳಿಗೆ ತಲಾ 02 ಹುದ್ದೆಗಳಂತೆ ಒಟ್ಟು 10 ತರಬೇತುದಾರರ ಹುದ್ದೆಗಳು ಮಂಜೂರಾಗಿರುತ್ತವೆ. ಸರ್ಕಾರದ ಆದೇಶ ಸಂಖ್ಯೆ: ಯುಸೇಇ 44 ಯುಸೇಕ್ರೀ 2015, ಬೆಂಗಳೂರು, ದಿನಾಂಕ: 04-12-2015 ರನ್ವಯಚಾಮರಾಜನಗರ ಜಿಲ್ಲೆಯ ಸಂತೆಮರಳ್ಳಿ ಕ್ರೀಡಾ ವಸತಿ ನಿಲಯಕ್ಕೆ 02 ತರಬೇತುದಾರರ ಹುದ್ದೆಗಳು ಮಂಜೂರಾಗಿರುತ್ತವೆ. ಸದರಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿರುವ ತರಬೇತುದಾರರ ಸೇವೆಯನ್ನು ಪಡೆಯಲು ಆದೇಶಿಸಲಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ-ಇವೈಡಬ್ಲ್ಯೂ /178/2021 ದಿನಾಂಕ: 10-10-2022 ರಲ್ಲಿ 176 ತಾಲ್ಲೂಕು ತರಬೇತುದಾರರು ಕಂ ಸಂಯೋಜಕರ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ. ಸದರಿ ಹೊಸದಾಗಿ ಸೃಜಿಸಲಾದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಲು ಕ್ರಮ ವಹಿಸಲಾಗಿದ್ದು, ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.</td></tr>
<tr><td>ಇ)</td><td>ಸದರಿ ಸಂಸ್ಥೆಗಳಲ್ಲಿ ಗುತ್ತಿಗೆ/ ಹೊರಗುತ್ತಿಗೆ/ಅತಿಥಿ ತರಬೇತಿದಾರರಾಗಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;</td><td>ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಪ್ರಸ್ತುತ ಒಟ್ಟು 111 ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದಾರೆ. ವಿವರ ಕೆಳಕಂಡಂತಿದೆ:-
<table>
<tr><th>ಕ್ರಸ</th><th>ವಿವರ</th><th>ತರಬೇತುದಾರರ ಸಂಖ್ಯೆ</th></tr>
<tr><td>1</td><td>ಮಾಸಿಕ ಸಂಚಿತ ವೇತನದ ಆಧಾರದ ತರಬೇತುದಾರರ ಸಂಖ್ಯೆ</td><td>67</td></tr>
<tr><td>2</td><td>ವಾರ್ಷಿಕ ಗುತ್ತಿಗೆ ಆಧಾರದ ತರಬೇತುದಾರರ ಸಂಖ್ಯೆ</td><td>44</td></tr>
<tr><td>3</td><td>ಅತಿಥಿ ತರಬೇತುದಾರರ ಸಂಖ್ಯೆ</td><td>00</td></tr>
<tr><td></td><td>ಒಟ್ಟು</td><td>111</td></tr>
</table></td></tr>
</table>

<table>
<tr>
<td>ಈ)</td>
<td>ಸದರಿಯವರಿಗೆ ತಲಾ ನೀಡಲಾಗುತ್ತಿರುವ ವೇತನ ಹಾಗೂ ಇತರೆ ಆರ್ಥಿಕ ಸವಲತ್ತುಗಳೇನು; (ವಿವರಗಳೊಡನೆ ಮಾಹಿತಿ ನೀಡುವುದು)</td>
<td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅನುದಾನಿತ ಸಂಸ್ಥೆಯಾದ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತರಬೇತುದಾರರಿಗೆ ನೀಡಲಾಗುತ್ತಿರುವ ವೇತನ ಹಾಗೂ ಇತರ ಆರ್ಥಿಕ ಸವಲತ್ತುಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸ</th><th>ವಿವರ</th><th>ಮಾಸಿಕ ಸಂಚಿತ ವೇತನ (ರೂಗಳಲ್ಲಿ)</th></tr>
<tr><td>01</td><td>ಹಿರಿಯ ತರಬೇತುದಾರರು</td><td>70,000/-</td></tr>
<tr><td>02</td><td>ತರಬೇತಿಯಲ್ಲಿ ಡಿಪ್ಲೋಮ ಮತ್ತು ಪದವಿ ಹೊಂದಿರುವ ತರಬೇತುದಾರರು</td><td>47,952/-</td></tr>
<tr><td>03</td><td>ತರಬೇತಿಯಲ್ಲಿ ಡಿಪ್ಲೋಮ ಹೊಂದಿಲ್ಲ ಮತ್ತು ಪದವಿ ಹೊಂದಿರುವ ತರಬೇತುದಾರು</td><td>37,260/-</td></tr>
<tr><td>04</td><td>ತರಬೇತಿಯಲ್ಲಿ ಡಿಪ್ಲೋಮ ಮತ್ತು ಪದವಿ ಹೊಂದಿರುವ ತರಬೇತುದಾರರು [ಒಂದು ವರ್ಷದ ಅವಧಿಗೆ ನೇಮಕಗೊಂಡವರು]</td><td>39,6960/-</td></tr>
<tr><td>05</td><td>ಆರು ವಾರಗಳು ಸರ್ಟಿಫಿಕೇಟ್ ಕೋರ್ಸ ಕಿರಿಯ ತರಬೇತುದಾರರು [ಒಂದು ವರ್ಷದ ಅವಧಿಗೆ ನೇಮಕಗೊಂಡವರು]</td><td>26,000/-</td></tr>
</table>
ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾಸಿಕ ಸಂಚಿತ ವೇತನ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತುದಾರರು ಕನಿಷ್ಟ 20 ವರ್ಷಗಳು ಕರ್ತವ್ಯ ನಿರ್ವಹಿಸಿ, ವಯೋನಿವೃತ್ತಿ/ಮರಣ ಹೊಂದುವ ಸಂದರ್ಭದಲ್ಲಿ ರೂ 6.65 ಲಕ್ಷ ಇಡುಗಂಟು, ಇಪಿಎಫ್ ಸೌಲಭ್ಯ, ವಾರ್ಷಿಕ ಗರಿಷ್ಟ ರೂ 60,000/- ಗಳವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.</td>
</tr>
<tr>
<td>ಉ)</td>
<td>ಖಾಲಿ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು?</td>
<td>ತರಬೇತುದಾರರ ಸೇವೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ-ಇವೈಡಬ್ಲ್ಯೂ /178/2021 ದಿನಾಂಕ: 10-10-2022 ರಲ್ಲಿ 176 ತಾಲ್ಲೂಕು ತರಬೇತುದಾರರು ಕಂ ಸಂಯೋಜಕರ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ. ಸದರಿ ಹೊಸದಾಗಿ ಸೃಜಿಸಲಾದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಲು ಕ್ರಮ ವಹಿಸಲಾಗಿದ್ದು, ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.</td>
</tr>
</table>

ವೈಎಸ್‌ಡಿ-ಇಬಿಬಿ/192/2022

**(ಡಾ|| ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ
ಮತ್ತು ಕ್ರೀಡಾ ಸಚಿವರು

# ಅನುಬಂಧ

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1439

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಕ್ರೀಡಾ ವಸತಿ ನಿಲಯಗಳ ಜಿಲ್ಲಾವಾರು ವಿವರ

| ಕ್ರಸ | ಕ್ರೀಡಾ ವಸತಿ ನಿಲಯಗಳು | ಕ್ರಸ | ಕ್ರೀಡಾ ವಸತಿ ನಿಲಯಗಳು |
|---|---|---|---|
| 01 | ಕ್ರೀಡಾ ವಸತಿ ನಿಲಯ, ಹಾವೇರಿ | 17 | ಕ್ರೀಡಾ ವಸತಿ ನಿಲಯ, ಕೋಲಾರ |
| 02 | ಕ್ರೀಡಾ ವಸತಿ ನಿಲಯ, ಧಾರವಾಡ | 18 | ಕ್ರೀಡಾ ವಸತಿ ನಿಲಯ, ಗದಗ |
| 03 | ಕ್ರೀಡಾ ವಸತಿ ನಿಲಯ, ಚಿಕ್ಕಮಗಳೂರು | 19 | ಕ್ರೀಡಾ ವಸತಿ ನಿಲಯ, ಕಾರವಾರ, ಉತ್ತರ ಕನ್ನಡ |
| 04 | ಕ್ರೀಡಾ ವಸತಿ ನಿಲಯ, ಚಿತ್ರದುರ್ಗ | 20 | ಕ್ರೀಡಾ ವಸತಿ ನಿಲಯ, ತುಮಕೂರು |
| 05 | ಕ್ರೀಡಾ ವಸತಿ ನಿಲಯ, ಕೊಪ್ಪಳ | 21 | ಕ್ರೀಡಾ ವಸತಿ ನಿಲಯ, ಮೈಸೂರು |
| 06 | ಕ್ರೀಡಾ ವಸತಿ ನಿಲಯ, ಕಲಬುರ್ಗಿ | 22 | ಕ್ರೀಡಾ ವಸತಿ ನಿಲಯ, ಬಾಗಲಕೋಟೆ |
| 07 | ಕ್ರೀಡಾ ವಸತಿ ನಿಲಯ, ರಾಯಚೂರು | 23 | ಕ್ರೀಡಾ ವಸತಿ ನಿಲಯ, ದಾವಣಗೆರೆ |
| 08 | ಕ್ರೀಡಾ ವಸತಿ ನಿಲಯ, ಮಂಗಳೂರು(ದ.ಕ) | 24 | ಕ್ರೀಡಾ ವಸತಿ ನಿಲಯ, ವಿಜಯಪುರ |
| 09 | ಕ್ರೀಡಾ ವಸತಿ ನಿಲಯ, ಚಾಮರಾಜನಗರ | 25 | ಕ್ರೀಡಾ ವಸತಿ ನಿಲಯ, ಉಡುಪಿ |
| 10 | ಕ್ರೀಡಾ ವಸತಿ ನಿಲಯ, ಚಿಕ್ಕಬಳ್ಳಾಪುರ | 26 | ಕ್ರೀಡಾ ವಸತಿ ನಿಲಯ, ಬಳ್ಳಾರಿ |
| 11 | ಕ್ರೀಡಾ ವಸತಿ ನಿಲಯ, ರಾಮನಗರ | 27 | ಕ್ರೀಡಾ ವಸತಿ ನಿಲಯ, ಸಂತೇಮರಳ್ಳಿ, ಚಾಮರಾನಗರ |
| 12 | ಕ್ರೀಡಾ ವಸತಿ ನಿಲಯ, ಹಾಸನ | 28 | ಕ್ರೀಡಾ ವಸತಿ ನಿಲಯ, ಶಿವಮೊಗ್ಗ |
| 13 | ಕ್ರೀಡಾ ವಸತಿ ನಿಲಯ, ಮಡಿಕೇರಿ | 29 | ಕ್ರೀಡಾ ವಸತಿ ನಿಲಯ, ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು ನಗರ |
| 14 | ಕ್ರೀಡಾ ವಸತಿ ನಿಲಯ, ಪೊನ್ನಂಪೇಟೆ | 30 | ಕ್ರೀಡಾ ವಸತಿ ನಿಲಯ, ಮಂಡ್ಯ |
| 15 | ಕ್ರೀಡಾ ವಸತಿ ನಿಲಯ, ಯಾದಗಿರಿ | 31 | ಕ್ರೀಡಾ ವಸತಿ ನಿಲಯ, ಬೆಳಗಾವಿ |
| 16 | ಕ್ರೀಡಾ ವಸತಿ ನಿಲಯ, ಬೀದರ್ | 32 | ಕ್ರೀಡಾ ವಸತಿ ನಿಲಯ, ಹಳಿಯಾಳ, ಉತ್ತರ ಕನ್ನಡ |